# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 289

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 05-07-2023

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>"ಶಕ್ತಿ" ಯೋಜನೆ ಜಾರಿಯಾದ ಮೇಲೆ ಸಾರಿಗೆ ಇಲಾಖೆಯ ಅಧೀನದ ನಾಲ್ಕು ನಿಗಮಗಳ ಬಸ್‌ಗಳಲ್ಲಿ (ಮಹಿಳೆಯರಿಗೆ ಉಚಿತ ಪ್ರಯಾಣ ಸೇವೆ ಒದಗಿಸುವ ಬಸ್‌ಗಳಲ್ಲಿ) ಸಂಚರಿಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆ ಆಗಿದೆಯೇ; ಹಾಗಿದ್ದಲ್ಲಿ, ನಿಗಮಗಳವಾರು ಸರಾಸರಿ ಏರಿಕೆಯಾಗಿರುವ ಪ್ರಯಾಣಿಕರ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>ಹೌದು.<br><br>ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣ ಸೇವೆ ಒದಗಿಸುವ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆ ಆಗಿರುವ ಮಾಹಿತಿ ಈ ಕೆಳಕಂಡಂತಿದೆ:<br><br><table><tr><th>ಸಂಸ್ಥೆ</th><th>ಸರಾಸರಿ ಪ್ರಯಾಣಿಕರ ಸಂಖ್ಯೆ</th></tr><tr><td>ಕ.ರಾ.ರ.ಸಾ.ನಿಗಮ</td><td>4.49 ಲಕ್ಷ</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>11.13 ಲಕ್ಷ</td></tr><tr><td>ವಾ.ಕ.ರ.ಸಾ.ಸಂಸ್ಥೆ</td><td>7.16 ಲಕ್ಷ</td></tr><tr><td>ಕ.ಕ.ರ.ಸಾ.ನಿಗಮ</td><td>2.14 ಲಕ್ಷ</td></tr></table></td></tr>
<tr><td>ಆ.</td><td>"ಶಕ್ತಿ" ಯೋಜನೆ ಜಾರಿಗೂ ಮೊದಲು ಈ ನಿಗಮಗಳ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸಂಚರಿಸುತ್ತಿದ್ದ ಸರಾಸರಿ ಪ್ರಯಾಣಿಕರ ಸಂಖ್ಯೆ ಹಾಗೂ ಸಂಗ್ರವಾಗುತ್ತಿದ್ದ ಸರಾಸರಿ ಮೊತ್ತವೆಷ್ಟು; (ವಿವರ ನೀಡುವುದು)</td><td>"ಶಕ್ತಿ" ಯೋಜನೆ ಜಾರಿಗೂ ಮೊದಲು ಈ ನಿಗಮಗಳ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸಂಚರಿಸುತ್ತಿದ್ದ ಸರಾಸರಿ ಪ್ರಯಾಣಿಕರ ಸಂಖ್ಯೆ ಹಾಗೂ ಸಂಗ್ರವಾಗುತ್ತಿದ್ದ ಸರಾಸರಿ ಮೊತ್ತದ ಮಾಹಿತಿ ಈ ಕೆಳಕಂಡಂತಿದೆ:<br><br><table><tr><th>ಸಂಸ್ಥೆ</th><th>ಪ್ರಯಾಣಿಕರ ಸಂಖ್ಯೆ</th><th>ಮೊತ್ತ (ರೂ.ಲಕ್ಷಗಳಲ್ಲಿ)</th></tr><tr><td>ಕ.ರಾ.ರ.ಸಾ.ನಿಗಮ</td><td>26.25 ಲಕ್ಷ</td><td>1067.07</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>27.34 ಲಕ್ಷ</td><td>444.00</td></tr><tr><td>ವಾ.ಕ.ರ.ಸಾ.ಸಂಸ್ಥೆ</td><td>16.49 ಲಕ್ಷ</td><td>473.07</td></tr><tr><td>ಕ.ಕ.ರ.ಸಾ.ನಿಗಮ</td><td>13.50 ಲಕ್ಷ</td><td>450.00</td></tr></table></td></tr>
<tr><td>ಇ.</td><td>ಈ ಯೋಜನೆಯಡಿ ಸಂಚಾರಕ್ಕೆ ಲಭ್ಯ ಇರುವ/ ಸೇವೆ ಒದಗಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು; (ನಿಗಮಗಳವಾರು ಮಾಹಿತಿ ನೀಡುವುದು)</td><td>ಈ ಯೋಜನೆಯಡಿ ಸಂಚಾರಕ್ಕೆ ಲಭ್ಯ ಇರುವ/ ಸೇವೆ ಒದಗಿಸುತ್ತಿರುವ ಬಸ್ಸುಗಳ ಸಂಖ್ಯೆಯ ನಿಗಮವಾರು ಮಾಹಿತಿ ಈ ಕೆಳಕಂಡಂತಿದೆ:<br><br><table><tr><th>ಸಂಸ್ಥೆ</th><th>ಬಸ್ಸುಗಳ ಸಂಖ್ಯೆ</th></tr><tr><td>ಕ.ರಾ.ರ.ಸಾ.ನಿಗಮ</td><td>6239</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>5057</td></tr><tr><td>ವಾ.ಕ.ರ.ಸಾ.ಸಂಸ್ಥೆ</td><td>3911</td></tr><tr><td>ಕ.ಕ.ರ.ಸಾ.ನಿಗಮ</td><td>4334</td></tr></table></td></tr>
<tr><td>ಈ.</td><td>ಸಾರಿಗೆ ಇಲಾಖೆಗೆ ಸೇರಿದ ಎಷ್ಟು ಎಲೆಕ್ಟ್ರಿಕ್ ಬಸ್ಸುಗಳು ಸಂಚಾರಕ್ಕೆ ಮುಕ್ತವಾಗಿವೆ; ಇನ್ನೆಷ್ಟು ಎಲೆಕ್ಟ್ರಿಕ್ ಬಸ್ಸುಗಳನ್ನು</td><td>ಕ.ರಾ.ರ.ಸಾ.ನಿಗಮ:<br><br>ಪ್ರಸ್ತುತ 48 ಎಲೆಕ್ಟ್ರಿಕ್ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಇದಲ್ಲದೆ, ಮುಂದಿನ</td></tr>
</table>

| | | |
|---|---|---|
| | ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಇದ್ದಲ್ಲಿ, ವಿವರಗಳನ್ನು ಒದಗಿಸುವುದು) | ದಿನಗಳಲ್ಲಿ ಜಿ.ಸಿ.ಸಿ. ಆಧಾರದ ಮೇಲೆ 300 ವಿದ್ಯುತ್‌ಚಾಲಿತ ಬಸ್‌ಗಳನ್ನು ಆಚರಣೆ ಮಾಡಲಾಗುವುದು.<br><br>**ಬೆಂ.ಮ.ಸಾ.ಸಂಸ್ಥೆ:**<br><br>390 ವಿದ್ಯುತ್‌ಚಾಲಿತ ಬಸ್‌ಗಳನ್ನು ಆಚರಣೆ ಮಾಡಲಾಗುತ್ತಿದೆ. ಇದಲ್ಲದೆ, ಮುಂದಿನ ದಿನಗಳಲ್ಲಿ ಹವಾನಿಯಂತ್ರಣ ರಹಿತ 921 ವಿದ್ಯುತ್‌ಚಾಲಿತ ಬಸ್ ಗಳನ್ನು ಆಚರಣೆ ಮಾಡಲಾಗುವುದು.<br><br>**ವಾ.ಕ.ರ.ಸಾ.ಸಂಸ್ಥೆ:**<br><br>450 ಎಲೆಕ್ಟ್ರಿಕ್ ಬಸ್ಸುಗಳನ್ನು ಜಿ.ಸಿ.ಸಿ. ಆಧಾರದ ಮೇಲೆ ಕಾರ್ಯಾಚರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. |
| ಉ. | ರಾಜ್ಯದಲ್ಲಿನ ಎಷ್ಟು ಗ್ರಾಮಗಳು ಸಾರಿಗೆ ಇಲಾಖೆಯ ಬಸ್ ಸೌಕರ್ಯ ಹೊಂದಿರುವುದಿಲ್ಲ ಹಾಗೂ ಅದಕ್ಕೆ ಕಾರಣಗಳೇನು; ಎಲ್ಲಾ ಗ್ರಾಮಗಳಿಗೂ ಸಾರಿಗೆ ಬಸ್ ಸೌಕರ್ಯವನ್ನು ಒದಗಿಸಿಕೊಡಲಾಗುವುದೇ? (ವಿವರ ನೀಡುವುದು) | **ಕ.ರಾ.ರ.ಸಾ.ನಿಗಮ:**<br><br>ಈ ನಿಗಮದ ವ್ಯಾಪ್ತಿಯಲ್ಲಿ ಒಟ್ಟು 21670 ಗ್ರಾಮಗಳು ಇದ್ದು, ಬಹುತೇಕ ಎಲ್ಲಾ ಗ್ರಾಮಗಳಿಗೂ ನಿಗಮದ ಹಾಗೂ ಖಾಸಗಿ ಸಾರಿಗೆ ಬಸ್ಸುಗಳ ಸೌಲಭ್ಯವಿರುತ್ತದೆ. ರಸ್ತೆ ಸೌಲಭ್ಯವಿರುವ 766 ಗ್ರಾಮಗಳ ಸಮೀಪದವರೆಗೂ ಖಾಸಗಿ ಹಾಗೂ ನಿಗಮದ ಸಾರಿಗೆ ಸೌಲಭ್ಯವಿರುತ್ತದೆ. ಆದರೆ, 204 ಗ್ರಾಮಗಳಿಗೆ ಭಾರಿ ವಾಹನಗಳ ಆಚರಣೆಗೆ ಅನುಕೂಲವಾಗುವ ರಸ್ತೆ ಸೌಲಭ್ಯವಿರುವುದಿಲ್ಲವಾದ್ದರಿಂದ, ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುವುದಿಲ್ಲ.<br><br>ಸಾರಿಗೆ ಸೌಲಭ್ಯವಿಲ್ಲದ ಗ್ರಾಮಗಳಿಗೆ ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೋಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಹಂತಹಂತವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ವಾ.ಕ.ರ.ಸಾ.ಸಂಸ್ಥೆ:**<br><br>ಒಟ್ಟು 4610 ಗ್ರಾಮಗಳ ಪೈಕಿ 4565 ಗ್ರಾಮಗಳಿಗೆ ಸಾರಿಗೆ ಬಸ್ ಸೌಕರ್ಯ ಒದಗಿಸಲಾಗಿದೆ. ಉಳಿದ 45 ಗ್ರಾಮಗಳಿಗೆ ವಾಹನ ಸಂಚಾರ ಯೋಗ್ಯ ರಸ್ತೆ ಇಲ್ಲದ ಕಾರಣ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ.<br><br>**ಕ.ಕ.ರಾ.ಸಾ.ನಿಗಮ:**<br><br>ಒಟ್ಟು 5283 ಗ್ರಾಮಗಳಿದ್ದು, ಅವುಗಳಲ್ಲಿ 5241 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಉಳಿದ 42 ಗ್ರಾಮಗಳಿಗೆ ಭಾರಿ ವಾಹನಗಳ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಇಲ್ಲದ ಪ್ರಯುಕ್ತ, ಮುಖ್ಯ ರಸ್ತೆಯವರೆಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಸದರಿ 42 ಗ್ರಾಮಗಳಿಗೆ ರಸ್ತೆ ದುರಸ್ತಿಗೊಳಿಸಿದ ನಂತರ ಸಾರಿಗೆ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುವುದು. |

| | | |
|---|---|---|
| | | ಸಾರಿಗೆ ಸೌಲಭ್ಯವಿಲ್ಲದ ಗ್ರಾಮಗಳಿಗೆ ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೋಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಹಂತಹಂತವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಬೆಂ.ಮ.ಸಾ.ಸಂಸ್ಥೆ:**<br><br>ಸಂಸ್ಥೆಯ ಕಾರ್ಯವ್ಯಾಪ್ತಿಗೆ ಒಳಪಡುವ ಹಾಗೂ ಭಾರಿ ವಾಹನಗಳ ಆಚರಣೆಗೆ ಯೋಗ್ಯ ರಸ್ತೆಗಳಿರುವ ಎಲ್ಲಾ ಪ್ರದೇಶಗಳಿಗೂ ಬೇಡಿಕೆ/ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ. |

ಸಂಖ್ಯೆ: ಟಿಡಿ 76 ಟಿಸಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು